# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ಸಂಖ್ಯೆ: ಕವಿಪ್ರನಿನಿ/ಬಿ16/4977/2005-06

ನಿಗಮ ಕಾರ್ಯಾಲಯ,
ಕಾವೇರಿ ಭವನ,
ಬೆಂಗಳೂರು-560 009.

ದಿನಾಂಕ : 24 SEP 2012

ಎಲ್ಲಾ ಮುಖ್ಯ ಇಂಜಿನಿಯರು(ವಿ)
ಎಲ್ಲಾ ಅಧೀಕ್ಷಕ ಇಂಜಿನಿಯರು(ವಿ)
ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರು(ವಿ)
ಕವಿಪ್ರನಿನಿ/ಎಸ್ಕಾಂಗಳು.

ಮಾನ್ಯರೇ,

ವಿಷಯ: ಹೊಸದಾಗಿ ವ್ಯಾಖ್ಯಾನಿಸಿದ ಅಂಶದಾಯಿ ಕೊಡುಗೆ ಯೋಜನೆ ವ್ಯಾಪ್ತಿಗೆ ಬರುವ ನಿಗಮ ನೌಕರರು ಸೇವೆಯಲ್ಲಿರುವಾಗಲೇ ಮೃತರಾದ ಸಂದರ್ಭದಲ್ಲಿ ಅವರ ಕುಟುಂಬದ ವಾರಸುದಾರರಿಗೆ ನೀಡಬಹುದಾದ ಇಡಿಗಂಟಿನ ಪರಿಹಾರ ಬಗ್ಗೆ.

ಉಲ್ಲೇಖ: ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/ಬಿ14/4977/2005-06
ದಿನಾಂಕ: 5.7.2007, 21.08.207 ಮತ್ತು 29.08.2011.

- - -

ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/4977/2005-06 ದಿನಾಂಕ 29.08.2011 ರ ಅನ್ವಯ ಹೊಸದಾಗಿ ವ್ಯಾಖ್ಯಾನಿಸಿದ ಅಂಶದಾಯಿ ಕೊಡುಗೆ ಯೋಜನೆ ವ್ಯಾಪ್ತಿಗೆ ಬರುವ ನಿಗಮದ ನೌಕರರು ಸೇವೆಯಲ್ಲಿರುವಾಗಲೇ ಮೃತರಾದ ಸಂದರ್ಭದಲ್ಲಿ ಅವರ ಕುಟುಂಬದ ವಾರಸುದಾರರಿಗೆ ನಿಡಬಹುದಾದ ಇಡಿಗಂಟಿನ ಪರಿಹಾರದ ಬಗ್ಗೆ ಹೊರಡಿಸಲಾಗಿದ್ದ ಆದೇಶದಲ್ಲಿನ ಕಂಡಿಕೆ 6 ರಲ್ಲಿ ಸೂಚಿಸಲಾಗಿರುವ ನೇಮಕಾತಿ ಪ್ರಾಧಿಕಾರಿ ಹಾಗೂ ಅಧೀಕರಿಸುವ ಅಧಿಕಾರ ವ್ಯಾಪ್ತಿಯ ಬಗ್ಗೆ ಹೆಚ್ಚಿನ ಸ್ಪಷ್ಟನೆ ಈ ಕೆಳಕಂಡಂತೆ ನೀಡಲಾಗಿದೆ.

- ಗ್ರೂಪ್ 'ಎ' ಮತ್ತು 'ಬಿ'' ಶ್ರೇಣಿಯ ಅಧಿಕಾರಿಗಳಿಗೆ ಮಂಜೂರಾತಿ ಪ್ರಾಧಿಕಾರಿಯವರಾಗಿ (Sanctioning Authority) ನಿರ್ದೇಶಕರು (ಆಡಳಿತ ಮತ್ತು ಮಾನವ ಸಂಪನ್ಮೂಲ) ಹಾಗೂ ಅಧೀಕರಿಸುವ ಅಧಿಕಾರ (Authorisation Authority) ಆರ್ಥಿಕ ಸಲಹೆಗಾರರು (ಲೆಕ್ಕಗಳು ಮತ್ತು ಸಂಪನ್ಮೂಲ), ಕವಿಪ್ರನಿನಿ, ಬೆಂಗಳೂರು.
- ಗ್ರೂಪ್ 'ಸಿ' ಮತ್ತು'ಡಿ' ಶ್ರೇಣಿಯ ನೌಕರರಿಗೆ ಮಂಜೂರಾತಿ ಪ್ರಾಧಿಕಾರಿಯವರಾಗಿ (Sanctioning Authority) ಸಂಬಂಧಪಟ್ಟ ನೇಮಕಾತಿ ಪ್ರಾಧಿಕಾರಿಗಳು ಹಾಗೂ ಅಧೀಕರಿಸುವ ಅಧಿಕಾರ(Authorisation Authority) ಆರ್ಥಿಕ ಸಲಹೆಗಾರರು (ಲೆಕ್ಕಗಳು ಮತ್ತು ಸಂಪನ್ಮೂಲ), ಕವಿಪ್ರನಿನಿ, ಬೆಂಗಳೂರು. (ಗ್ರೂಪ್ 'ಸಿ' ಮತ್ತು'ಡಿ' ಶ್ರೇಣಿಯ ನೌಕರರ ಪಿಂಚಣಿ ಸವಲತ್ತುಗಳ ಮಂಜೂರಾತಿ ಮತ್ತು ಅಧಿಕರಿಸುವ ಕಾರ್ಯವನ್ನು ಆಯಾ ಕಂಪನಿಯ ವ್ಯಾಪ್ತಿಗೆ ಹಸ್ತಾಂತರಿಸುವವರೆವಿಗೂ).

- ಮೇಲಿನ ಎಲ್ಲಾ ಸಂದರ್ಭಗಳಲ್ಲಿ ಮೃತಪಟ್ಟ ಅಧಿಕಾರಿ/ನೌಕರರ ಕುಟುಂಬದ ವಾರಸುದಾರರಿಗೆ ಇಡಿಗಂಟಿನ ಪರಿಹಾರ ಮಂಜೂರಾತಿ ಮತ್ತು ಅಧೀಕರಿಸುವ ಮುನ್ನ ಪಿಂಚಣಿ ಮತ್ತು ಉಪದಾನ ಟ್ರಸ್ಟ್‌ನಿಂದ ಪಿಂಚಣಿ ವಂತಿಗೆ ಸಂದಾಯದ ಬಗ್ಗೆ ದಾಖಲೆಗಳನ್ನು ಪರಿಶೀಲಗೆ ಒಳಪಡಿಸಿದ/ದೃಢೀಕರಿಸಿದ ನಂತರವೇ ಮುಂದಿನ ಕ್ರಮ ಕೈಗೊಳ್ಳಬೇಕಿರುತ್ತದೆ.
- ದಾಖಲಾತಿ ಪತ್ರಗಳ ನಿರ್ವಹಣೆಗೆ ಸಂಬಂಧಿಸಿದಂತೆ, ಗ್ರೂಪ್ 'ಎ', ಬಿ, ಸಿ, ಮತ್ತು ಡಿ ಶ್ರೇಣಿಯ ಅಧಿಕಾರಿ/ನೌಕರರ ಸೇವಾಪುಸ್ತಕವನ್ನು ಒಳಗೊಂಡಂತೆ ಸಂಬಂಧಿಸಿದ ಎಲ್ಲಾ ದಾಖಲಾತಿ ಪತ್ರಗಳನ್ನು ಹಾಲಿ ಚಾಲ್ತಿಯಲ್ಲಿ ಪದ್ಧತಿಯಂತೆ ಪಿಂಚಣಿ ಶಾಖೆ, ಕವಿಪ್ರನಿನಿ ಯಲ್ಲಿಯೇ ಮುಂದಿನ ಆದೇಶ ನೀಡುವವರೆವಿಗೂ ನಿರ್ವಹಿಸತಕ್ಕದ್ದು.

ಉಳಿದಂತೆ ನಿಗಮ ದಿನಾಂಕ 29.08.2011 ರ ಆದೇಶದಲ್ಲಿನ ಇತರ ಅಂಶಗಳಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ.

2/1/9

ನಿರ್ದೇಶಕರು
(ಆಡಳಿತ ಮತ್ತು ಮಾನವ ಸಂಪನ್ಮೂಲ)

ಗೆ,

1. ವ್ಯವಸ್ಥಾಪಕ ನಿರ್ದೇಶಕರು, ಬೆಸ್ಕಾಂ/ಚೆಸ್ಕಾಂ/ಹೆಸ್ಕಾಂ/ಮೆಸ್ಕಾಂ/ಸೆಸ್ಕ್/ಪಿ.ಸಿ.ಕೆ.ಎಲ್/ಕೆ.ಪಿ.ಸಿ.ಎಲ್.
2. ನಿರ್ದೇಶಕರು, (ಪ್ರಸರಣ), ಕವಿಪ್ರನಿನಿ.
3. ಎಲ್ಲಾ ನಿರ್ದೇಶಕರು(ತಾಂತ್ರಿಕ), ಎಸ್ಕಾಂಗಳು.
4. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ/ಎಸ್ಕಾಂಗಳು.
5. ಆಪ್ತ ಕಾರ್ಯದರ್ಶಿಗಳು, ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು(ಪ್ರಸರಣ)/ನಿರ್ದೇಶಕರು (ಹಣಕಾಸು)/ ನಿರ್ದೇಶಕರು(ಆಡಳಿತ ಮತ್ತು ಮಾನವ ಸಂಪನ್ಮೂಲ), ಕಂಪನಿ ಕಾರ್ಯದರ್ಶಿ, ಕವಿಪ್ರನಿನಿ.
6. ಆಪ್ತ ಕಾರ್ಯದರ್ಶಿಗಳು ಐಜಿಪಿ(ವಿ ಮತ್ತು ಇ), ಕವಿಪ್ರನಿನಿ ಮತ್ತು ಎಸ್ಕಾಂಗಳು/ಸಿಸಿಎಫ್, ಕವಿಪ್ರನಿನಿ
   www.kptcl.com/eprasarana for information of: